# ಇದು ಎಂದೆಂದಿಗೂ 'ನಿಚ್ಚಂ ಪೊಸತು'!

**ವಿ. ಚಂದ್ರಶೇಖರ ನಂಗಲಿ**

DOI: https://doi.org/10.5281/zenodo.11525518

## ABSTRACT:

'ನಿಚ್ಚಂ ಪೊಸತು' ಕೃತಿಯಲ್ಲಿ ಕನ್ನಡದಲ್ಲಿ ಪ್ರಕಟವಾದ ಬುದ್ಧ ಕೇಂದ್ರಿತ ಕವನಗಳನ್ನು ಕುರಿತ ಸಮಾಲೋಚನೆ, ಮೈಸೂರು ಕೇಂದ್ರಿತ ಸಾಂಸ್ಕೃತಿಕ ಮಹತ್ವವನ್ನು ಕುರಿತ ಪರಿಶೀಲನೆ, ಯೆಹೂದ್ಯರಿಗಾಗಿ ಮುಂದೆ ಬಂದು ಪೀಡಿತನಾಗುವ ಮೋಸೆಸ್‌ನ ಮಹಾಯಾನ, ಮುಲ್ಕಾಜ್ ಆನಂದ್ ಮತ್ತು ಬಾಬಾಸಾಹೇಬ ಅಂಬೇಡ್ಕರ್ ಅವರ ಮಾತುಕತೆ, ಭೀಮಜ್ಯೋತಿ ಬಿ.ಬಸವಲಿಂಗಪ್ಪ ಅವರ ಅರಿವಿನ ಯಾನ, ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯ ಮನೋವಿಕಾರಗಳನ್ನು ಮೀರಿ ಸೋದರಸ್ನೇಹದಿಂದ ಬಾಳಿದ ಎಸ್‌ಪಿಬಿ+ಜೇಸುದಾಸ್ ಕುರಿತ ಲೇಖನಗಳೂ ಇವೆ. ಇವೆಲ್ಲವನ್ನೂ 'ನಿಚ್ಚಂ ಪೊಸತು' ಎಂಬ ಹೃದ್ಯಭಾವದಿಂದ ಭೈರಪ್ಪನವರು ಒಳಗೊಂಡಿರುವುದು ಸ್ತುತ್ಯಾರ್ಹವಾಗಿದೆ. ಭೈರಪ್ಪನವರ ಪುಸ್ತಕದ ತಾತ್ವಿಕತೆ ಎಂದರೆ ಜಾತಿ ಶ್ರೇಣೀಕರಣದ ಕೆನೆಪದರದಲ್ಲಿ ತನ್ನನ್ನು ಗುರುತಿಸಿಕೊಳ್ಳದೆ, ಬಾಳ್ವೆಯಲ್ಲಿ ಬೆಂದು ಸೀದು ಕರಿಕಾದ ಗಸಿಪದರದಲ್ಲಿ ತನ್ನನ್ನು ಗುರುತಿಸಿಕೊಂಡಿರುವುದು. ಇದು ಎಂದೆಂದಿಗೂ 'ನಿಚ್ಚಂ ಪೊಸತು'!

## KEYWORDS:

ನಿಚ್ಚಂ ಪೊಸತು, ಅಂಬೇಡ್ಕರ್, ಮೈಸೂರು, ಪಂಪ, ಬಸವರಾಜ ಕಟ್ಟೀಮನಿ, ತೇಜಸ್ವಿ , ಕೋಟಿಗಾನಹಳ್ಳಿ ರಾಮಯ್ಯ.

**(ಯುವವಿದ್ವಾಂಸರಾದ ಡಾ.ಕುಪ್ಪನಹಳ್ಳಿ ಎಂ. ಭೈರಪ್ಪ ಅವರ 'ನಿಚ್ಚಂ ಪೊಸತು' ಕೃತಿಯನ್ನು ಕುರಿತು ಹಿರಿಯ ವಿಮರ್ಶಕರಾದ ಡಾ. ವಿ. ಚಂದ್ರಶೇಖರ ನಂಗಲಿ ಅವರು ಬರೆದಿರುವ ವಿಮರ್ಶೆ)**


**ಕೃತಿ ವಿವರ:**

ನಿಚ್ಚಂ ಪೊಸತು (ಲೇಖನಗಳ ಸಂಕಲನ)

ಡಾ. ಕುಪ್ನಳ್ಳಿ ಎಂ. ಭೈರಪ್ಪ

ಶ್ರೀ ವಿಷ್ಣೇಶ್ವರ ಪ್ರಕಾಶನ, ಮೈಸೂರು.

ಪುಟ:೨೫೮, ಬೆಲೆ ₹೨೬೦; ವರ್ಷ ೨೦೨೦.



**ಭಾಗ - ೧**

ಆದಿಕವಿ ಪಂಪನ 'ನಿಚ್ಚಂ ಪೊಸತು' ನುಡಿಗಟ್ಟನ್ನು ಕೃತಿಯ ಶೀರ್ಷಿಕೆ ಮಾಡಿಕೊಂಡಿರುವ ಭೈರಪ್ಪ ತನ್ನ ದೃಷ್ಟಿಯನ್ನು ಅರಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ: "ಈ ಮಾತು ಕನ್ನಡ ಮಾತ್ರವಲ್ಲದೆ, ವಿಶ್ವದ ಎಲ್ಲಾ ಭಾಷೆ - ಸಾಹಿತ್ಯ - ಸಂಸ್ಕೃತಿಗಳ ಗತಿಶೀಲತೆಗೂ ಅನ್ವಯಿಸುವ ಮಾತಾಗಿದೆ. ಪಂಪ ಮಹಾಕವಿಯ ನುಡಿದೀಪ ಹಿಡಿದು ಯುಗಮಾನಗಳ ಹಿಂದಣ - ಇಂದಣ - ಮುಂದಣಗಳ ಅರಿವಿನ ದೀಪ ಆರದಿರುವಂತೆ ನಾವು ನಿತ್ಯವೂ ಒಡನಾಡಬೇಕಿದೆ"... ವಸ್ತುವಿನ ಗತಿಶೀಲತೆಯನ್ನು ಪಂಪ - ಅಲ್ಲಮ ಮೈತ್ರಿಯಲ್ಲಿ ಮನಗಂಡು ಪ್ರಸ್ತುತಕ್ಕೆ ಅಳವಡಿಸುವ ಮನಸ್ಸಿಗೆ ದೇಶ ಕಾಲಗಳ ಸೋಂಕು ತಟ್ಟುವುದಿಲ್ಲ. ಮಾನವನಿರ್ಮಿತವಾದ ಭವಬಂಧನಗಳಿಗೆ ಸಿಕ್ಕು ಆಧಿ-ವ್ಯಾಧಿ-ಸೋಂಕಿಗೆ ಈಡಾದ ಮನಸ್ಸುಗಳಿಗೆ ಮುಕ್ತ ಗ್ರಹಿಕೆ ಸಾಧ್ಯವಾಗುವುದಿಲ್ಲ. ಭೈರಪ್ಪ ಇಲ್ಲಿ ಬರೆದ ಲೇಖನಗಳ ವಸ್ತುಗಳನ್ನು ಗಮನಿಸಿದರೆ, ಪ್ರಾಚೀನ - ಮಧ್ಯಕಾಲೀನ - ಸಮಕಾಲೀನ ಎಂಬ ಕೃತಕ ವಿಭಜನೆಯ ಗರ ಬಡಿದಿಲ್ಲವೆಂಬುದು ಗೊತ್ತಾಗುತ್ತದೆ.

ಬುದ್ಧ ಮತ್ತು ಬಸವ ತೌಲನಿಕ ಚಿಂತನೆಯಲ್ಲಿ ಚಾರಿತ್ರಿಕ ಭೌತವಾದಿ ತಾತ್ವಿಕ ದೃಷ್ಟಿಯಿದೆ. ಪೂರ್ವಸೂರಿಗಳಾದ ಎಂ.ಎಂ.ಕಲಬುರ್ಗಿ, ಧಾರವಾಡದ ಕುಮಾರಸ್ವಾಮೀಜಿ, ಎಲ್.ಬಸವರಾಜು, ಬಾಬಾಸಾಹೇಬ ಅಂಬೇಡ್ಕರ್ ಇವರೆಲ್ಲರೂ ಬುದ್ಧ ಬಸವನ ಕುರಿತು ಮಂಡಿಸಿರುವ ತೌಲನಿಕ ಚಿಂತನಾಕ್ರಮವನ್ನು ಊರೆಗೋಲು ಮಾಡಿಕೊಂಡು, ಬೌದ್ಧ ತಾತ್ವಿಕತೆಗೂ ಶರಣ ತಾತ್ವಿಕತೆಗೂ ಇರುವ ಸೋದರಸ್ನೇಹವನ್ನು ಎತ್ತಿ ತೋರಿಸಿದ್ದಾರೆ. ಕೊನೆಗೆ, ಇಂಥ ದೃಷ್ಟಿ ಧೋರಣೆಗಳಿಗೆ ಹಿಡಿದಿರುವ ಜಾತಿವಾದಿ ಗ್ರಹಣದ ಪ್ರಸ್ತಾಪ ಮಾಡಿ, ನಮ್ಮಲ್ಲಿ ಅರಳಬೇಕಾದ ಎಚ್ಚರಕ್ಕೆ ಒತ್ತು ಕೊಟ್ಟಿದ್ದಾರೆ. ಈ

ಲೇಖನದಲ್ಲಿ "ಬೌದ್ಧತ್ವದಲ್ಲಿಲ್ಲದ ವಚನಾಂಕಿತ ಅಭಿವ್ಯಕ್ತಿ" ಎಂಬ ಮಾತಿದೆ. ಅಂದರೆ ಶರಣರ ವಚನಾಂಕಿತಗಳು ಬೌದ್ಧಶರಣರಲ್ಲಿ ಕಂಡುಬರುವುದಿಲ್ಲವೆಂಬ ಅಭಿಪ್ರಾಯ ಇಲ್ಲಿದೆ. ಇದು ತಪ್ಪುಗ್ರಹಿಕೆ. ಬೌದ್ಧಶರಣರಲ್ಲಿ ಬಹುನಾಮಿ ಪದ್ಧತಿ ಇರುವುದು ನಮ್ಮ ದೇಶದಲ್ಲಿ ಮಾತ್ರವಲ್ಲದೆ, ಚೀನಾ, ಟಿಬೆಟ್, ಜಪಾನ್, ವಿಯೆಟ್ನಾಂ ಮುಂತಾದ ದೇಶದ ಬೌದ್ಧಶರಣರನ್ನು ಗಮನಿಸಿದರೆ ಬಹುನಾಮಿ ಪದ್ಧತಿ ಅಥವಾ ಬಹುರೂಪಿ ಅಂಕಿತ ನಾಮಗಳು ಇವೆ ಎಂಬುದು ಸ್ಪಷ್ಟವಾಗುತ್ತದೆ.

ಬಸವರಾಜ ಕಟ್ಟೀಮನಿ ಅವರ 'ಹರಿಜನಾಯಣ' ಕಾದಂಬರಿ ಕುರಿತು ಭೈರಪ್ಪ ಮಂಡಿಸಿರುವ ಚಿಂತನೆಗಳು ದಲಿತ ಸಂಘರ್ಷ ಸಮಿತಿಯ ವಿಚ್ಛಿದ್ರಕಾರಿ ಶಕ್ತಿಗಳ ಅರಿವಿನಲ್ಲಿ ಮಿಂದೇಳುತ್ತಾ ಕಾದಂಬರಿಯ ವಸ್ತುವಿನ ಒಳಹೊಕ್ಕು ಬಾಲಾಪುರದ ಹರಿಜನ ಕೇರಿಯಲ್ಲಿನ "ದಲಿತಮೈತ್ರಿ"ಯ ಆಂತರಿಕತೆಗೊದಗಿದ ದಾರುಣ ಅಂತ್ಯವನ್ನು ಮನಗಂಡಿರುವ ಬಗೆಯು ಬಸವರಾಜ ಕಟ್ಟೀಮನಿ ಅವರ ದ್ರಷ್ಟಾರತೆಗೊಡ್ಡಿದ ವ್ಯಾಖ್ಯಾನವೇ ಆಗಿದೆ. ಈ ಕಾದಂಬರಿಯ ದಲಿತ ಪಾತ್ರಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ತಮ್ಮ ಊರೆಗೋಲಾಗಿ ಊರಿಕೊಂಡು ಮಾತನಾಡುವ ಬಗೆಯಲ್ಲಿ ಲೇಖಕರ ಮುಂಗಾಣ್ಕೆಯಿದೆ ಎಂಬುದನ್ನು ಭೈರಪ್ಪ ಸ್ಪಷ್ಟಪಡಿಸಿದ್ದಾರೆ. ಆದರೆ ಇಂಥದೊಂದು ಕೃತಿಗೆ ತಕ್ಷಣದಲ್ಲಿ ಸಿಗದ ವಿಮರ್ಶೆಯ ನ್ಯಾಯವನ್ನು ಹೇಳುತ್ತಾ ತತ್ಕಾಲದ ಬೌದ್ಧಿಕ ಜಡತ್ವದ ಬಗ್ಗೆಯೂ ಮಾತಾಡಿದ್ದಾರೆ.

ತೇಜಸ್ವಿಯವರ 'ಕಿರುಗೂರಿನ ಗಯ್ಯಾಳಿಗಳು' ಕುರಿತು ಭೈರಪ್ಪ ಬರೆದ ಲೇಖನವು ಪರಿಚಯಾತ್ಮಕ/ ವಿವರಣಾತ್ಮಕ/ ವಿಶ್ಲೇಷಣಾತ್ಮಕ ಎಂಬ ಮೂರೂ ಆಯಾಮಗಳಲ್ಲಿ ಬೆಳೆಯುತ್ತಾ ಆರಂಭದ ಓದುಗರನ್ನೂ ಕೂಡಾ ಆಪ್ತವಾಗಿ ಒಳಗೊಳ್ಳುತ್ತದೆ. ಉಪಸಂಹಾರದಲ್ಲಿ "ಮತ್ತೆ ಮತ್ತೆ ಮರುಹುಟ್ಟು ಪಡೆಯುತ್ತಾ"... ಬಂದಿರುವ ತೇಜಸ್ವಿಯವರ ಈ ಕೃತಿ ಹೆಬ್ಬಲಸಿನ ಮರ ಮತ್ತು ಬಿರುಗಾಳಿ ರೂಪಕದ ಮೂಲಕ ಪುರುಷ ಪ್ರಾಧಾನ್ಯತೆಯನ್ನು ಛಿದ್ರಿಸುತ್ತಾ ಸ್ತ್ರೀ ಕೇಂದ್ರಿತ ಪರಿವರ್ತನೆಯ ಕಡೆಗೆ ಕೊಟ್ಟಿರುವ ಆದ್ಯತೆಯನ್ನು ಭೈರಪ್ಪ ಎಳೆ ಎಳೆಯಾಗಿ ನಿರೂಪಿಸಿದ್ದಾರೆ: "ಕಿರುಗೂರಿನ ಗಯ್ಯಾಳಿಗಳು ಕಥನವು ನೀಳ್ಗತೆಯ ರೂಪದಿಂದ ರಂಗಭೂಮಿಗಿಳಿದು, ನಾಟಕ ಕೃತಿಯಾಗಿ ನಿರೂಪಗೊಂಡು, ತದನಂತರ ಸಿನೆಮಾ ಆಗಿಯೂ ಅಭಿವ್ಯಕ್ತಗೊಂಡು, ಮತ್ತೆ

ಮತ್ತೆ ಮರುಹುಟ್ಟು ಪಡೆದು ನಿರಂತರ ಚಲನೆಯನ್ನೂ, ಪ್ರಸರಣವನ್ನೂ ಸಾಧ್ಯವಾಗಿಸಿ ಕೊಂಡಿದ್ದು ಮಹತ್ವದ ಸಂಗತಿ"... ಎಂದಿದ್ದಾರೆ. ಈ ಲೇಖನ ತೇಜಸ್ವಿಯವರ ಸೃಜನಶೀಲತೆಯೊಂದಿಗೆ ಕನ್ನಡ ಸಂಸ್ಕೃತಿ ನಡೆಸಿದ ಹೃದಯಸಂವಾದವಾಗಿ ಮೂಡಿದೆ.

ಕೋಟಿಗಾನಹಳ್ಳಿ ರಾಮಯ್ಯ ಅವರ 'ಶರಣು ಶರಣಯ್ಯ' ಕೋಲಾರದ ಸಾಹಿತ್ಯ-ಸಾಂಸ್ಕೃತಿಕ ಸಮಾರಂಭಗಳಲ್ಲಿ ತಪ್ಪದೇ ಹಾಡುವ ಹಾಡು. ಇದು ನೆಲಸಂಸ್ಕೃತಿಯ ಶ್ರಮ ಧ್ಯಾನದ ಅನುಸಂಧಾನವಾಗಿ ಮೂಡಿಬಂದ ಜೀವ ಕಾರುಣ್ಯದ ಅನುಪಮ ಗಾನವೆಂದು ಭೈರಪ್ಪನವರು ತನ್ಮಯತೆಯಿಂದ ನಿರೂಪಿಸಿದ್ದಾರೆ. ಈ ಲೇಖನದಲ್ಲಿ ಇದೊಂದೇ ಗೀತೆಯನ್ನು ಮಾತ್ರವಲ್ಲದೆ, 'ನೀರು ಮಾರೋ ದೊರೆಗಳು'; 'ನೀರ ದೀಪಗಳು'; 'ನೆನಪಿರಲಣ್ಣ'; 'ಓ ಆದಿ ತಾತ' ಗೀತೆಗಳನ್ನೂ ತಮ್ಮ ತೆಕ್ಕೆಗೆ ತೆಗೆದುಕೊಂಡು ಕವಿತೆಗಳಲ್ಲಿರುವ ನೆಲಸಂಸ್ಕೃತಿಯ ಗತಿಶೀಲತೆಯ ಮನೋಧರ್ಮವನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಉಪಭೋಗಸಂಸ್ಕೃತಿಯ ಯಜಮಾನಿಕೆಯ ವಿರುದ್ಧ ನಾವೆಲ್ಲರೂ ಸಮಷ್ಟಿ ಪ್ರಜ್ಞೆಯಿಂದ ಕಟ್ಟಿಕೊಳ್ಳಬೇಕಾದ ಸಂಯೋಗಸಂಸ್ಕೃತಿಯ ಸ್ವರೂಪವನ್ನು ಸ್ಪಷ್ಟಪಡಿಸಿದ್ದಾರೆ.

ಕೆ.ಆರ್.ದುರ್ಗಾದಾಸ್ ಅವರ "ಅನುಸಂಧಾನದ ಹೊಸಹಾದಿ" - ೧೭ ವಿಮರ್ಶಾಲೇಖನಗಳ ಸಂಕಲನ. ಇದು ವಿಮರ್ಶೆಯ ವಿಮರ್ಶೆ. ಈ ಎಲ್ಲಾ ಲೇಖನಗಳಲ್ಲಿ ದುರ್ಗಾದಾಸ್ ಅನುಸರಿಸಿದ ವಿಮರ್ಶಾ ದೃಷ್ಟಿಯ ತಾತ್ವಿಕತೆಯನ್ನು ಭೈರಪ್ಪನವರು "ಸಬಾಲ್ಟನ್ ಓದು" ಎಂದು ಕರೆಯುತ್ತಾರೆ. ಸಬಾಲ್ಟ್ರನ್ ಎಂಬುದು ಪಾಶ್ಚಾತ್ಯಮೂಲದ ಪರಿಭಾಷೆ. ನಮ್ಮದೇಶದಲ್ಲಿರುವ ಜಾತಿಪದ್ಧತಿ ಜಗತ್ತಿನ ಯಾವ ದೇಶದಲ್ಲೂ ಇಲ್ಲ. ಇಂಥ ಜಾತಿಗ್ರಸ್ತ ಒಲವು ನಿಲುವುಗಳನ್ನು ಹೇಳಲು ವಿಮರ್ಶಕರು ತಮ್ಮದೇ ಆದ ಹೊಸ ಪರಿಭಾಷೆಯಲ್ಲಿ ಹೇಳುವುದು ಅಪೇಕ್ಷಣೀಯ. ಈ ದೃಷ್ಟಿಯಿಂದ ನಾವು ಕುವೆಂಪು ಅವರ 'ಗೊಬ್ಬರ' ಕವಿತೆಯನ್ನು ದರ್ಶಿಸಬಹುದು. ಈ ಕವಿತೆಯು ಜಾತಿಜನ್ಯ ಮನೋವಿಕಾರಗಳ ನಿರೂಪಣೆ ಕೂಡಾ. ಮರದ ತುದಿಹೂವು, ಎಲೆ, ಕೊಂಬೆ, ಕಾಂಡ ಮುಂತಾದ ಮೇಲು ಮೇಲಿನ ದೃಷ್ಟಿಯ ಪರಿಶೀಲನೆ ಮತ್ತು ಅವಲೋಕನಕ್ಕಿಂತಲೂ ಬೇರೆಯಾದ ಬಗೆಯನ್ನು ಮನಸ್ಸಿನಲ್ಲಿಟ್ಟುಕೊಂಡೇ ಕುವೆಂಪು ಅವರು 'ಗೊಬ್ಬರ' ಕವಿತೆಯನ್ನು ರೂಪಿಸಿದ್ದಾರೆ. ನಮಗಿಂದು ಬೇಕಾಗಿರುವ ಅನುಸಂಧಾನದ

ಹೊಸಹಾದಿಯನ್ನು "ಗೊಬ್ಬರ ದೃಷ್ಟಿಯ ಓದು" ಎಂದು ಕರೆಯಬಹುದು. ದುರ್ಗಾದಾಸ್ ಅವರು ಇಲ್ಲಿನ ಲೇಖನಗಳಲ್ಲಿ ತೋರಿರುವ ಬದ್ಧತೆಯನ್ನು ಭೈರಪ್ಪ ನಿರೂಪಣೆ ಮಾಡುವಾಗ ಗೊಬ್ಬರ ದೃಷ್ಟಿಯ ಓದಿನ ಕಡೆಗೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಲೇಖನದ ಕೊನೆಯಲ್ಲಿ ಇಡೀ ಪುಸ್ತಕದ ಮುಖ್ಯಾಂಶಗಳನ್ನು ಗುರುತಿಸಿ ದುರ್ಗಾದಾಸ್ ಅವರ ಅನುಸಂಧಾನದ ಹೊಸಹಾದಿಯನ್ನು ಎಳೆ ಎಳೆಯಾಗಿ ನಿರೂಪಿಸಿದ್ದಾರೆ. ಇದರಿಂದ ಇಡೀ ಪುಸ್ತಕದ ಸ್ವರೂಪವನ್ನು ಗ್ರಹಿಸಲು ಸುಲಭ ಸಾಧ್ಯ.

ಕುಕ್ಕರಹಳ್ಳಿ ಬಸವರಾಜು ಬರೆದ 'ಹೊಸಹಾದಿ' ಎಂಬ ಕಥನದ ಆಧಾರದ ಮೇಲೆ ಭಾರತೀಯರ ಎದೆಯಲ್ಲಿ ವ್ಯಾಪಕವಾಗಿ ಮತ್ತು ಶಾಶ್ವತವಾಗಿ ನೆಲೆಸಿರುವ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಎಂಬ ಮನೋಮಾಲಿನ್ಯದ ವಿರಾಟ್ ಸ್ವರೂಪ ದರ್ಶನ ಮಾಡಿಸುವ ಲೇಖನವನ್ನು ಭೈರಪ್ಪ ರಚಿಸಿದ್ದಾರೆ. ಷಡಕ್ಷರಿ ಅಜ್ಜ ಮತ್ತು ಅರವಿಂದನ ಸಂಬಂಧದಲ್ಲಿ ಜಾತಿಜನ್ಯ ಮನೋಮಾಲಿನ್ಯವನ್ನು ಮೀರುವ ನಡೆ ನುಡಿಗಳಿದ್ದರೂ ಇದಕ್ಕೆ ವ್ಯಾಪಕವಾದ ಸಾಮಾಜಿಕ ಸಿದ್ಧಿಯಿಲ್ಲದಂತಾಗಿರುವುದು ಜಾತಿಮತಿಗಳ ಖೆಡ್ಡಾರಚನೆಯಿಂದಲೇ ಎಂಬುದನ್ನು ಭೈರಪ್ಪನವರು ನಿರೂಪಿಸಿದ್ದಾರೆ. ಪರಂಪರಾಗತವಾಗಿ ಬಂದಿರುವ ಜಾತಿಯೆಂಬ ಪೆಡಂಭೂತವು ನಮ್ಮ ದೇಶದಲ್ಲಿ ದಲಿತ ಬದುಕುಗಳನ್ನು ಮತ್ತು ದಲಿತ ಹಕ್ಕುಗಳನ್ನು ಹೊಸಕಿ ಹಾಕುತ್ತಾ ಸಂವಿಧಾನದ ಅಪಮೌಲ್ಯೀಕರಣ ಮಾಡುವ ನಿರ್ಲಜ್ಜ ನೀತಿ ರೀತಿಗಳನ್ನು ಕಥನದ ಪ್ರಸಂಗಗಳ ಮೂಲಕ ತೋರಿಸಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಅಭಿಮತದಂತೆ ಜಾತಿಪದ್ಧತಿಯು ಇಟ್ಟಿಗೆಯ ಗೋಡೆ ಅಥವಾ ಮುಳ್ಳುತಂತಿ ಬೇಲಿಯಂತೆ ಭೌತಿಕವಾದ ಬಹಿರಂಗ ವಸ್ತುವಾಗಿರದೆ, ಅಂತರಂಗದ ಮಾನಸಿಕ ಕಲ್ಪನಾತ್ಮಕ ಸ್ಥಿತಿಯಾಗಿರುವುದರಿಂದ ನಾಶ ಪಡಿಸಲಾಗದ ಕೊಳೆಗೇರಿ ಮನಸ್ಸುಗಳ ಸೃಷ್ಟಿಗೆ ಕಾರಣವಾಗಿದೆ ಎಂಬ ನಿರ್ಣಯಕ್ಕೆ ಬರುತ್ತಾರೆ. ಹಾಗೆಂದು ನಿರಾಶರಾಗಿ ಕೈ ಚೆಲ್ಲುವುದಲ್ಲ! ಜಾತಿಯ ಸವಾಲುಗಳನ್ನು ಹೊಸನೋಟ, ಹೊಸಹೋರಾಟ, ಹೊಸಬದುಕುಗಳನ್ನು ನಿರಂತರವಾಗಿ ಕಂಡುಕೊಳ್ಳಬೇಕಾದ ತುರ್ತು ಭಾರತಕ್ಕಿದೆ ಎಂಬುದನ್ನು ಕಥೆ ಆಧಾರದಿಂದ ಹೊರಹೊಮ್ಮಿಸಿದ್ದಾರೆ.

'ಉಲಾಯ' ಎಂಬುದು ಡಾ.ಕೆ.ತಿಮ್ಮಯ್ಯ ಪ್ರಕಟಿಸಿರುವ ಜಾನಪದ

ಸಂಶೋಧನೆಯ ಕೃತಿ. ೨೦೦೦ ದಲ್ಲಿ ಪ್ರಕಟವಾದ ನನ್ನ 'ಕಾಡು ಮತ್ತು ತೋಪು' ಕೃತಿಯಲ್ಲಿ ಎಲ್‌ಪಿಜಿ (ಉದಾರೀಕರಣ-ಖಾಸಗೀಕರಣ-ಜಾಗತೀಕರಣ) ರುಚಿಗೆ ಒಗ್ಗುತ್ತಿರುವ ಈ ಇಪ್ಪತ್ತೊಂದನೇ ಶತಮಾನದ ಆರಂಭದಲ್ಲೇ ವಿಶ್ವಗ್ರಾಮ ಮತ್ತು ಸ್ಥಳೀಯ ಭೂಗೋಳದ ಮುಖಾಮುಖಿ ಮತ್ತು ಅನುಸಂಧಾನದ ಮೂಲಕ ನಮ್ಮತನದ ಅಸ್ಮಿತೆಯನ್ನು ಉಳಿಸಿಕೊಳ್ಳಲು ನಡೆಸಬೇಕಾದ ನಿರಂತರ ಹೋರಾಟವನ್ನು ಕುರಿತು ಬರೆದಿದ್ದೇನೆ. ಹಾಗೂ ಸಮ್ಯಕ್ ಜ್ಞಾನದ ಜಾನಪದೀಕರಣ ಹೇಗೆ ನಮ್ಮ ಬದುಕನ್ನು ಪ್ರಸ್ತುತವಾಗಿಡುತ್ತದೆ? ಎಂದು ಪ್ರತಿಪಾದಿಸಿದ್ದೇನೆ. 'ಉಲಾಯ' ಎಂದರೆ ದಾಸಯ್ಯಗಳು ಕ್ವಾರಣ್ಯ ಭಿಕ್ಷೆಗೆ ಹೋಗುವುದನ್ನು ಸೂಚಿಸುವ ನುಡಿಗಟ್ಟು. ಸಾಂಪ್ರದಾಯಿಕ 'ಉಲಾಯ' ಪದ್ಧತಿಯನ್ನು ತಿಮ್ಮಯ್ಯನವರು ಸಾಂಸ್ಕೃತಿಕ ಶೋಧನೆಯ ದೃಷ್ಟಿಯಿಂದ ಗ್ರಹಿಸಿರುವುದು ಗಮನಾರ್ಹ. ಈ 'ಉಲಾಯ' ಪದ ಪ್ರಯೋಗವಿಲ್ಲದೆ ಬಸವಣ್ಣನವರು ಇದೇ ಬಗೆಯ ಸಾಂಸ್ಕೃತಿಕ ಶೋಧನೆಯ ದೃಷ್ಟಿಯನ್ನು ಕಪ್ಪಡಿಗಳನ್ನು ಬೇಡಿಕೊಳ್ಳುವುದರ ಮೂಲಕ ಸಾಧಿಸಿದ್ದಾರೆ ಎಂಬುದನ್ನು ಭೈರಪ್ಪ ಮತ್ತು ಕೆ.ತಿಮ್ಮಯ್ಯ ಇಬ್ಬರೂ ಗಮನಿಸಬೇಕು:

**ಭಕ್ತಿ ಇಲ್ಲದ ಬಡವ ನಾನಯ್ಯ**
**ಕಕ್ಕಯ್ಯನ ಮನೆಯಲು ಬೇಡಿದೆ**
**ದಾಸಯ್ಯನ ಮನೆಯಲು ಬೇಡಿದೆ**
**ಚೆನ್ನಯ್ಯನ ಮನೆಯಲು ಬೇಡಿದೆ**
**ಎಲ್ಲ ಪುರಾತರು ನೆರೆದು,**
**ಭಕ್ತಿ-ಭಿಕ್ಷವನಿಕ್ಕಿದರೆ ಎನ್ನ ಪಾತ್ರೆ ತುಂಬಿತ್ತು**
**ಕೂಡಲಸಂಗಮದೇವ (ಎಲ್.ಬಿ: ೨೨೦)**

ನನ್ನ ದೃಷ್ಟಿಯಲ್ಲಿ ನೆಲಮುಟ್ಟುವ ಪ್ರೀತಿಗೆ ಈ ದೃಷ್ಟಿಕೋನ ಅತ್ಯುತ್ತಮ ನಿದರ್ಶನ. ಈ ಉಲಾಯ ಮನೋಧರ್ಮ ಇಂದಿನ ಅಗತ್ಯ ಕೂಡಾ. ಆದರೆ ಕೃಷಿಮೂಲ ಗ್ರಾಮೀಣ ಸಂಸ್ಕೃತಿಯ ಎಷ್ಟೋ ಆಚರಣೆಗಳ ಹಿಂದೆ ಜನ್ಮಾಧಾರಿತ ಅಸಮಾನತೆಯ ಸಾಮಾಜಿಕ ಶ್ರೇಣೀಕರಣವನ್ನು ಮತ್ತು ಉಳ್ಳವರ ಸ್ವಾರ್ಥಸಾಧಕ ಹುನ್ನಾರಗಳನ್ನು (=ಬೆತ್ತಲೆ ಸೇವೆ ಇತ್ಯಾದಿ) ಕಾಯ್ದು ಕೊಳ್ಳುವ ಜಾತಿಸೂಕ್ಷ್ಮಗಳು ಹುದುಗಿರುವುದನ್ನು ತೋರಿಸಿಕೊಟ್ಟಿರುವ ತಿಮ್ಮಯ್ಯನವರ ನಿರೂಪಣೆಗಳನ್ನು ಭೈರಪ್ಪನವರು

ಯಥೋಚಿತವಾಗಿ ಉಲ್ಲೇಖಿಸಿ ನಿರೂಪಿಸಿದ್ದಾರೆ. "ಉಲಾಯವೆಂಬ ಪದಸಂಗತಿಯನ್ನೇ ಗಮನಿಸಿದರೆ ಅದು ದಾಸಯ್ಯಗಳ ದೈವಿಕ ಶ್ರದ್ಧೆಯನ್ನು, ಸಾಂಸ್ಕೃತಿಕ ಬದ್ಧತೆಯನ್ನು ಹಾಗೂ ಆಧ್ಯಾತ್ಮಿಕ ಸಿದ್ಧಿಯನ್ನು ಒಟ್ಟಾಗಿ ಧ್ವನಿಸುತ್ತದೆ. ಮಾತ್ರವಲ್ಲದೆ ಮನುಷ್ಯ - ಮನುಷ್ಯರ ನಡುವಿನ ಅಂತರಗಳನ್ನು ಅಳಿಸಿ, ಅಹಮ್ಮುಗಳನ್ನು ಇಳಿಸಿ ಮಾನವೀಯತೆಯ ಮೂಲಕ ದೈವತ್ವಕ್ಕೆ ಏರುವ ಸಿದ್ಧಿಯಾನದ ಪರಂಪರೆಯನ್ನು ಅಂತರ್ಗತ ಮಾಡಿಕೊಂಡಿದೆ"... ಎಂಬ ಭೈರಪ್ಪನವರ ವ್ಯಾಖ್ಯಾನ ಬಸವಣ್ಣನವರ ವಚನಕ್ಕೂ ಅನ್ವಯವಾಗುತ್ತದೆ.

## ಭಾಗ - ೨

ಮೈಸೂರಿನ 'ಚಾಮುಂಡಿ ಬೆಟ್ಟ' ಕುರಿತು ಭೈರಪ್ಪನವರು ಲೇಖನವೊಂದನ್ನು ಬರೆದಿದ್ದಾರೆ. ಮೈಸೂರಿನ ಮಹಾಬಲ ಪರ್ವತವೇ ಕಾಲಕ್ರಮೇಣ ಚಾಮುಂಡಿ ಬೆಟ್ಟವಾಗಿದೆ ಎಂಬುದನ್ನು ಇದರಲ್ಲಿ ಪ್ರತಿಪಾದಿಸಿದ್ದಾರೆ. ಇದಕ್ಕಿಂತಲೂ ಮುಖ್ಯವಾದ ಸಂಗತಿಯೆಂದರೆ ಬುಡಕಟ್ಟು ಮೂಲದ ಏಳುಜನ ಅಕ್ಕತಂಗಿಯರ ಕಥನ, ಪೋತರಾಜು ಪರಂಪರೆಯೇ ಮಾತೃದೇವತೆಯ ಆರಾಧನಾ ತಾಣವಾಗಿ ಬದಲಾಗಿರಬಹುದೆಂಬ ಗ್ರಹಿಕೆಗೆ ಒತ್ತು ಕೊಟ್ಟಿದ್ದಾರೆ. ಕಬ್ಬು > ರಸ > (ಆಲೆಮನೆ) ಬೆಲ್ಲ > (ಕಾರ್ಖಾನೆ) ಸಕ್ಕರೆ ಆಗುವ ಪ್ರಕ್ರಿಯೆಯಲ್ಲಿ ನಿಸರ್ಗದಿಂದ ದೂರ ಸರಿಯುವ ಹಾಗೆಯೇ, ಬುಡಕಟ್ಟು ಮೂಲದ ಏಳುಜನ ಅಕ್ಕತಂಗೇರ ಕಥನದಿಂದ ದೂರವಾಗುತ್ತಾ ನಾಡದೇವತೆಯಾಗಿ ಕಾಲಾನುಕ್ರಮದಲ್ಲಿ ಚಾಮುಂಡೇಶ್ವರಿಯಾಗುತ್ತಾಳೆಂಬ ನಿರೂಪಣೆಯನ್ನಿಲ್ಲಿ ಕೊಡಲಾಗಿದೆ..." ಏಳುನೂರು ಮೆಟ್ಟಿಲು ಮುಟ್ಟುವ ಹೊತ್ತಿಗೆ ಮಹಾನಂದಿಯ ದರ್ಶನವಾಗುತ್ತದೆ. ಈ ನಂದಿ ದಕ್ಷಿಣ ಭಾರತದಲ್ಲೇ ಮೂರನೇ ಅತಿದೊಡ್ಡ ಏಕಶಿಲಾ ಕೆತ್ತನೆಯಾಗಿದೆ. ನಂದಿಗೆ ವಂದಿಸಿ ತಡೆದರೆ ಇನ್ನೇನು ದೇವದೇವಿಯರ ದರ್ಶನಕ್ಕೆ ಸಮೀಪವಾದಿರಿ ನಡೆಯಿರಿ ಮುನ್ನಡೆಯಿರಿ ಎಂಬ ಸೂಚನೆ ಸಿಕ್ಕುತ್ತದೆ. ಹಾಗೇ ಮುನ್ನಡೆದಂತೆ ದೇಹದೊಳಗೆ ವಿಷವಿಕ್ಕುತ್ತ ಕುಣಿದಾಡುವ ಕೊಲೆಸ್ಟ್ರಾಲ್ ತನ್ನ ತಾವನ್ನು ಕಳೆದುಕೊಳ್ಳುತ್ತಾ - ಏನವ್ವ ನಿನ್ನ ಪಾದದ ಮಾಯೆ, ಎಲ್ಲ ಬೆವರಿಳಿಸಿ ಬೆಳೆಯುವ ಛಾಯೆ, ಬಹುಜನಕ್ಕೆಲ್ಲ ಬೆಳಕಿನ ತಾಯೆ - ಎಂದು ಅವ್ವನಲ್ಲಿ ಮೊರೆಯಿಟ್ಟು ಬೆಟ್ಟದ ಬಯಲಲ್ಲಿ ತೊಟ್ಟಿಕ್ಕುವಂತಾಗುತ್ತದೆ. ಸುಸ್ತಿನ ಜೊತೆಗೆ ಬೆಟ್ಟ ಮುಟ್ಟುವ ಕುತೂಹಲವೂ, ಬೆವರು ಕಳೆದು ಬೆಟ್ಟದ ಬಯಲು ಬೆಳಕಿಗೆ

ತನುಮನವೊಡ್ಡಿದ ಆನಂದವೂ ಒಟ್ಟಿಗೆ ಉಂಟಾಗುತ್ತದೆ"... ಸ್ಥಳೀಯ ಪುರಾಣ ಮತ್ತು ಮೌಖಿಕ ಕಥನಗಳ ಹಂಗಿಲ್ಲದ ಈ ಬಗೆಯ ಆರೋಹಣ ಕ್ರಮದಲ್ಲಿ ಅನುಭವವೆಲ್ಲಾ ಅನುಭಾವವಾಗಿ ಪರಿವರ್ತನೆ ಹೊಂದಿ ಮನಸ್ಸು ನಿರಾಳವಾಗುತ್ತದೆ. ಬಹುಶಃ ಇದೇ ಚಾಮುಂಡಿ ಬೆಟ್ಟದ ನಿಜೋದಯ. ಉಳಿದಂತೆ ನಮಗೆ ಕೇಳಿ ಬರುವ ನಂಜುಂಡ, ಚಾಮುಂಡಿ, ಉರಿಕಾತಮ್ಮ , ದೇವಿರಮ್ಮ , ಉತ್ನಳ್ಳಿ ಮಾರಮ್ಮ ಮುಂತಾದ ಮೌಖಿಕ ಕಥನಗಳಲ್ಲಿ ಜಾತಿಪದ್ಧತಿಯ ತದ್ರೂಪಿತನವೇ ಅಡಗಿದೆ. ಆದ್ದರಿಂದ, "ಅಧಿಕಾರದ ಮದವೆಕ್ಕಿದ ಕಣ್ಣುಗಳಿಗೆ ಕಾಣುವ ಚಾಮುಂಡವ್ವನಿಗಿಂತ ಅಂತರಂಗದೊಳಗೆ ಅರಿವಾಗುವ ಚಾಮುಂಡವ್ವನೇ ಹೆಚ್ಚು ಆಪ್ತ ಎನಿಸುವುದು; ಬೆಟ್ಟದ ಬಯಲಲ್ಲಿ ಬಯಲಾಗುವವರಿಗೆ ಮಾತ್ರವೇ ಮೂಲ ಮಹಾಬಲ ಬೆಟ್ಟದ ಮಹತ್ವ ಅರಿವಾಗುವುದು; ತಾಯಿಗರ್ಭದಿಂದ ಹೊರಬಂದ ಶಿಶುವಿನಂತೆ ಚಾಮುಂಡಿ ಬೆಟ್ಟಕ್ಕೆ ಹೋಗಿಬಂದ ಜನಮನವು ಮುದಗೊಳ್ಳುವುದು" ಎಂಬ ಉಪಸಂಹಾರದ ನುಡಿಗಳೇ ನಿಜವೆನಿಸುತ್ತದೆ.

ಅಂದು "ಬುದ್ಧಂ ಶರಣಂ ಗಚ್ಛಾಮಿ" ಇಂದು "ಕ್ರಿಸ್ತಂ ಶರಣಂ ಗಚ್ಛಾಮಿ" - ಎಂಬಂತೆ ಮೂಡಿಬಂದಿರುವ ಲೇಖನವೂ ಇದರಲ್ಲಿದೆ. ಬಿಳಿಯರ ಆಗಮನ, ಕ್ರೈಸ್ತ ಧರ್ಮ ಪ್ರಚಾರ, ದೇಶಭಾಷೆಗಳ ಜ್ಞಾನ ಪುನರುಜ್ಜೀವನ, ವಸಾಹತೀಕರಣಗಳ ಪ್ರಕ್ರಿಯಾತ್ಮಕ ಸಂಬಂಧಗಳನ್ನು ಇಲ್ಲಿ ವಿವೇಚಿಸಲಾಗಿದೆ. ವಿಶೇಷವಾಗಿ ಕೋಲಾರ, ಕೆಜಿಎಫ್‌ಗೆ ಸಂಬಂಧಿಸಿದಂತೆ ಕ್ರೈಸ್ತ ಧರ್ಮ ಪ್ರಚಾರದ ಎಳೆಯನ್ನು ಇದಕ್ಕಾಗಿ ನಡೆಸಿದ ಕ್ರೈಸ್ತ ಮಿಷನರಿಗಳ ಕಾಲ್ನಡಿಗೆಯ ಯಾನವನ್ನು ಭೈರಪ್ಪ ಅಧಿಕೃತ ಮೂಲಗಳಿಂದ ಹೆಕ್ಕಿ ತೆಗೆದು ಉದಾಹರಿಸಿದ್ದಾರೆ. ಜಾತಿಪದ್ಧತಿ ಮತ್ತು ಅಸ್ಪೃಶ್ಯತೆ ಅನುಭವಿಸುತ್ತಿದ್ದ ದಲಿತರು ಹೇಗೆಲ್ಲಾ ಕ್ರೈಸ್ತ ಧರ್ಮಕ್ಕೆ ತಮ್ಮನ್ನು ತೆತ್ತುಕೊಂಡರೆಂಬುದನ್ನು ನಿರೂಪಿಸಿದ್ದಾರೆ. ಹಾಗೇ "ದಲಿತರು ಕ್ರೈಸ್ತ ಧರ್ಮವನ್ನು ಸ್ವೀಕರಿಸಿದರೂ ಅಸ್ಪೃಶ್ಯತೆ ಅನುಭವವು ತಪ್ಪಿಲ್ಲ"... ಎಂಬ ಎಚ್ಚರವನ್ನು ಮರೆತಿಲ್ಲ. ಕ್ರೈಸ್ತ ಮಿಷನರಿಗಳು ದೇಶಭಾಷೆಗಳ ಜ್ಞಾನ ಪುನರುಜ್ಜೀವನಕ್ಕೆ ಎಷ್ಟೇ ದುಡಿದರೂ ಕ್ರೈಸ್ತ ಧರ್ಮ ಪ್ರಚಾರಕ್ಕೆ ಅಡ್ಡಿಯಾಗುವಂಥ ಕಡೆಗಳಲ್ಲಿ ದುಡಿಯಲಿಲ್ಲ ಎಂಬುದನ್ನು ಮರೆಯಬಾರದು. ತೆಲುಗಿನಲ್ಲಿ ಸಿ.ಪಿ.ಬ್ರೌನ್ ಅವರು ವೇಮನ ಪದ್ಯಗಳಿಗೆ ಕೊಟ್ಟ Upliftment ಗಮನಾರ್ಹ! ಆದರೆ ಕನ್ನಡದಲ್ಲಿ ವಚನಸಾಹಿತ್ಯದ ಪ್ರಕಟಣೆ ಮತ್ತು ಸಂಪಾದನೆಗೆ ಯಾವೊಬ್ಬ ಕ್ರೈಸ್ತ ಮಿಷನರಿಯೂ ಮುಂದೆ

ಬರಲಿಲ್ಲ ಎಂಬುದನ್ನು ಎಂ.ಎಂ.ಕಲಬುರ್ಗಿ ಅವರು ದಾಖಲಿಸಿದ್ದಾರೆ. ಒಟ್ಟು ಸಮಗ್ರ ದೃಷ್ಟಿಯಲ್ಲಿ ಭಾರತೀಯ ದಲಿತರು "ಕ್ರಿಸ್ತಂ ಶರಣಂ ಗಚ್ಛಾಮಿ" ಎಂದು ನಂಬಿ ನಡೆಯಲು ಕಾರಣವಾದ ಜಾತಿಮತಿಗಳ ದಬ್ಬಾಳಿಕೆಯನ್ನು ಭೈರಪ್ಪ ವಸ್ತುನಿಷ್ಠವಾಗಿ ನಮ್ಮ ಮುಂದಿಟ್ಟಿದ್ದಾರೆ.

'ನಿಚ್ಚಂ ಪೊಸತು' ಕೃತಿಯಲ್ಲಿ ಕನ್ನಡದಲ್ಲಿ ಪ್ರಕಟವಾದ ಬುದ್ಧ ಕೇಂದ್ರಿತ ಕವನಗಳನ್ನು ಕುರಿತ ಸಮಾಲೋಚನೆ, ಮೈಸೂರು ಕೇಂದ್ರಿತ ಸಾಂಸ್ಕೃತಿಕ ಮಹತ್ವವನ್ನು ಕುರಿತ ಪರಿಶೀಲನೆ, ಯೆಹೂದ್ಯರಿಗಾಗಿ ಮುಂದೆ ಬಂದು ಪೀಡಿತನಾಗುವ ಮೋಸೆಸ್‌ನ ಮಹಾಯಾನ, ಮುಲ್ಕ್ರಾಜ್ ಆನಂದ್ ಮತ್ತು ಬಾಬಾಸಾಹೇಬ ಅಂಬೇಡ್ಕರ್ ಅವರ ಮಾತುಕತೆ, ಭೀಮಜ್ಯೋತಿ ಬಿ. ಬಸವಲಿಂಗಪ್ಪ ಅವರ ಅರಿವಿನ ಯಾನ, ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಯ ಮನೋವಿಕಾರಗಳನ್ನು ಮೀರಿ ಸೋದರಸ್ನೇಹದಿಂದ ಬಾಳಿದ ಎಸ್‌ಪಿಬಿ+ಜೇಸುದಾಸ್ ಕುರಿತ ಲೇಖನಗಳೂ ಇವೆ. ಇವೆಲ್ಲವನ್ನೂ 'ನಿಚ್ಚಂ ಪೊಸತು' ಎಂಬ ಹೃದ್ಯಭಾವದಿಂದ ಭೈರಪ್ಪನವರು ಒಳಗೊಂಡಿರುವುದು ಸ್ತುತ್ಯಾರ್ಹವಾಗಿದೆ. ಭೈರಪ್ಪನವರ ಪುಸ್ತಕದ ತಾತ್ವಿಕತೆ ಎಂದರೆ ಜಾತಿ ಶ್ರೇಣೀಕರಣದ ಕೆನೆಪದರದಲ್ಲಿ ತನ್ನನ್ನು ಗುರುತಿಸಿಕೊಳ್ಳದೆ, ಬಾಳ್ವೆಯಲ್ಲಿ ಬೆಂದು ಸೀದು ಕರಿಕಾದ ಗಸಿಪದರದಲ್ಲಿ ತನ್ನನ್ನು ಗುರುತಿಸಿಕೊಂಡಿರುವುದು. ಇದು ಎಂದೆಂದಿಗೂ 'ನಿಚ್ಚಂ ಪೊಸತು'! 'ಬೆಳಕಿನ ಹುಳು'ವಿನಂತೆ ಸಾಗಿರುವ ಭೈರಪ್ಪನವರಿಗೆ ಸಮಸ್ತ ಶುಭಾಶಯಗಳನ್ನು ಕೋರುತ್ತೇನೆ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.